ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—

ಅ) ಮತ್ತು ಆ)

೧. ಪಿ.ಕೆ. ಶ್ಯಾಮಸುಂದರ್ ಆಯೋಗ :

೧೯೮೭ರ ಸೆಪ್ಟೆಂಬರ್‌ನಲ್ಲಿ ಬೀದರ್‌ನಲ್ಲಿ ಸಿಖ್ ವಿದ್ಯಾರ್ಥಿಗಳ ಮತ್ತು ಇನ್ನಿತರರ ನಡುವ ನಡೆದ ಘರ್ಷಣೆಯ ಬಗ್ಗೆ ತನಿಖೆ ನಡೆಸಲು.

೨. ಎಂ. ಬಿ. ವಿಶ್ವನಾಥ್ ಆಯೋಗ :

೧೯೮೮ರ ಜನವರಿಯಲ್ಲಿ ಗುರುಮಿತ್‌ಕಲ್‌ನಲ್ಲಿ ನಡೆದ ಪೋಲೀಸ್ ದೌರ್ಜನ್ಯದ ಬಗ್ಗೆ ತನಿಖೆ ನಡೆಸಲು.

೩. ಬಿ. ಕೆ. ಸೋಮಶೇಖರ್ ಆಯೋಗ :

೧೯೮೭ರ ಫೆಬ್ರುವರಿಯಲ್ಲಿ ಗುಜುನೂರಿನಲ್ಲಿ ಶಾಶ್ವಾಷಕಿಯಾಗಿದ್ದ ಶ್ರೀಮತಿ ಪದ್ಮಮ್ಮ ಮತ್ತು ಅವರ ಪತಿ ಶ್ರೀ ನಾರಾಯಣ ಸ್ವಾಮಿ ಅವರ ಮೇಲೆ ಆಲ್ಲಿನ ಪೋಲೀಸರು ನಡೆಸಿದರೆನ್ನಲಾದ ಹಲ್ಲೆ ಬಗ್ಗೆ ಮತ್ತು ತತ್‌ಸಂಬಂಧವಾಗಿ ಪಾವಗಡದಲ್ಲಿ ನಡೆದ ಪೋಲೀಸ್ ಗೋಲಿಬಾರ್ ಬಗ್ಗೆ ತನಿಖೆ ನಡೆಸಲಂ.

೪) ಮುರಳಿಧರ್ ರಾವ್ ಆಯೋಗ :

ದಿನಾಂಕ ೧೭-೧೨-೮೭ರ 'ಡೆಕ್ಕನ್ ಹೆರಾಲ್ಡ್' ಪತ್ರಿಕೆಯಲ್ಲಿ ಪ್ರಕಟವಾದ ಸಣ್ಣ ಕತೆಯೊಂದರ ಪ್ರಕಟಣೆಯ ವಿರುದ್ಧ ಬೆಂಗಳೂರು, ಮೈಸೂರು ಮತ್ತು ತುಮಕೂರಿನಲ್ಲಿ ಪ್ರತಿಭಟನೆ ನಡೆಸಿದವರ ವಿರುದ್ಧ ಪೋಲೀಸರು ಗೋಲಿಬಾರ್ ಮಾಡಿ ಕೆಲವು ವ್ಯಕ್ತಿಗಳು ಮೃತರಾಗಿ ಹಲವರು ಗಾಯಗೊಂಡರು ಈ ಘಟನೆಗಳ ಬಗ್ಗೆ ತನಿಖೆ ನಡೆಸಲು.

೫. ವಕ್ಫ್ ವಿಚಾರಣಾ ಆಯೋಗ ;

ರಾಜ್ಯದಲ್ಲಿನ ವಕ್ಫ್ ಆಸ್ತಿಪಾಸ್ತಿಗಳ ದುರುಪಯೋಗದ ಬಗ್ಗೆ ತನಿಖೆ ನಡೆಸಲು.

ಇ) ಮೂರು :—೧ ಪಿ. ಕೆ. ಶ್ಯಾಮಸುಂದರ್ ಆಯೋಗ
೨ ವಕ್ಫ್ ವಿಚಾರಣಾ ಆಯೋಗ
೩ ಬಿ. ಕೆ. ಸೋಮಶೇಖರ್ ಆಯೋಗ

ಈ) ಪಿ. ಕೆ. ಶ್ಯಾಮಸುಂದರ್ ಆಯೋಗ ಮತ್ತು ಬಿ. ಕೆ. ಸೋಮಶೇಖರ್ ಆಯೋಗಗಳು ತಮ್ಮ ವರದಿಗಳನ್ನು ಇತ್ತೀಚೆಗೆ ಸರ್ಕಾರಕ್ಕೆ ಸಲ್ಲಿಸಿವೆ. ಈ ವರದಿಗಳು ಸರ್ಕಾರದ ಪರಿಶೀಲನೆಯಲ್ಲಿವೆ.

ವಕ್ಫ್ ವಿಚಾರಣಾ ಆಯೋಗದ ಅಧ್ಯಕ್ಷರಾದ ಶ್ರೀ ಬಷೀರ್ ಹುಸೈನ್ ಅವರು ವರದಿಯನ್ನು ಸಲ್ಲಿಸಿದ್ದಾರೆ. ಆದರೆ ಸದರಿ ಆಯೋಗದ ಇನ್ನಿಬ್ಬರು ಸದಸ್ಯರು ಈ ವರದಿಯನ್ನು ಅನುಮೋದಿಸಿಲ್ಲವಾದ್ದರಿಂದ ಈ ವರದಿಯನ್ನು ಸರ್ಕಾರವು ತಿರಸ್ಕರಿಸಿದೆ. ಆದುದರಿಂದ, ಕ್ರಮ ತೆಗೆದುಕೊಳ್ಳುವ ಪ್ರಮೇಯ ಉದ್ಭವಿಸುವುದಿಲ್ಲ.

ಉ) ಈ ವಿಚಾರಣಾ ಆಯೋಗಗಳಿಗೆ ಮಾಡಲಾದ ಒಟ್ಟು ವೆಚ್ಚ ರೂ. ೧೨,೧೧,೬೧೫.

ಐ.ಎ.ಎಸ್. ಅಧಿಕಾರಿಗಳ ಬಗ್ಗೆ

೫೯೨. **ಶ್ರೀ ಎಂ. ವಿ. ವೆಂಕಟಪ್ಪ** (ಮುಳಬಾಗಿಲು).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ಒಟ್ಟು ಐ.ಎ.ಎಸ್. ಅಧಿಕಾರಿಗಳ ಸಂಖ್ಯೆ ಎಷ್ಟು ?

ಆ) ಈ ಅಧಿಕಾರಿಗಳಿಗೆ ಕನ್ನಡ ಕಲಿಯುವುದಕ್ಕಾಗಿ ಸರ್ಕಾರವು ನೀಡುತ್ತಿರುವ ಉತ್ತೇಜನಗಳೇನು ?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—

ಅ) ೨೫೬.

ಆ) ಹೊಸದಾಗಿ ಸೇವೆಗೆ ಸೇರುವ ಐ.ಎ.ಎಸ್. ಪ್ರೊಬೇಷನರುಗಳಿಗೆ ಮಸೂರಿಯಲ್ಲಿ ಇರುವ ಲಾಲ್ ಬಹದ್ದೂರ್ ಶಾಸ್ತ್ರಿ ನ್ಯಾಷನಲ್ ಅಕಾಡಮಿ ಆಫ್ ಅಡ್ಮಿನಿಸ್ಟ್ರೇಷನ್‌ನಲ್ಲಿ ಹಾಗೂ ಮೈಸೂರಿನಲ್ಲಿರುವ ಆಡಳಿತ ತರಬೇತಿ ಕೇಂದ್ರದಲ್ಲಿ ಕನ್ನಡವನ್ನು ಕಲಿಸಲಾಗುತ್ತಿದೆ. ಅಲ್ಲದೆ, ಈ ಪ್ರೊಬೇಷನರ್‌ಗಳು ಕನ್ನಡ ಕಲಿಯಲು ಆರು ತಿಂಗಳಿಂಗಳ ಕಾಲ ಶಿಕ್ಷಕರನ್ನು ನೇಮಿಸಿಕೊಳ್ಳಲು ಅವರಿಗೆ ತಿಂಗಳಿಗೆ ೧೦೦ ರೂ. ಗಳಂತೆ ಸಹಾಯ ಧನವನ್ನು ಕೊಡಲಾಗುವುದು.

ಉಳಿದ ಐ.ಎ.ಎಸ್. ಅಧಿಕಾರಿಗಳಿಗೆ ಕೂಡ ಕನ್ನಡ ಕಲಿಯಲು ತರಬೇತಿ ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಬೆಂಗಳೂರಿನ ನಗರ ಕಲಾ ಆಯೋಗ

೨೪೩. **ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ).**—ಮಾನ್ಯ ಮುಖ್ಯಮಂತ್ರಿಗಳು **ಈ ಕೆಳಕಂಡ** ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ನಗರ ಕಲಾ ಆಯೋಗವು ''ಸುಂದರ ನಗರ'' ಎಂಬ ಕೃತಿಯನ್ನು ಪ್ರಕಟಿಸಿರುವುದು ನಿಜವೇ ?

ಆ) ಹಾಗಿದ್ದಲ್ಲಿ ಎಷ್ಟು ಪ್ರತಿಗಳು ಮುದ್ರಿಸಲ್ಪಟ್ಟಿವೆ ?

ಇ) ಈ ಪುಸ್ತಕದ ಸಿದ್ಧತೆ ಹಾಗೂ ಮುದ್ರಣಕ್ಕೆ ತಗುಲಿದ ಪೂರ್ಣ ವೆಚ್ಚವೆಷ್ಟು ?

ಈ) ಈ ಪುಸ್ತಕವನ್ನು ಯಾವ ಭಾಷೆಯಲ್ಲಿ ಮುದ್ರಿಸಲಾಗಿದೆ ?

ಉ) ಈ ಪುಸ್ತಕದ ಸಿದ್ಧತೆಗೆ ತಗುಲಿದ ತಲಾ ವೆಚ್ಚವೆಷ್ಟು ?

ಊ) ಈ ಪುಸ್ತಕದ ಮಾರಾಟದಿಂದ ಬಂದ ಹಣ ಸರ್ಕಾರಕ್ಕೆ ಪಾವತಿಯಾಗಿದೆಯೇ.

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—

ಅ) ಹೌದು.

ಆ) ೯,೦೦೦ ಪ್ರತಿಗಳು.

ಇ) ೧೪,೦೦,೦೦೦.೦೦ ರೂಪಾಯಿಗಳು.

ಈ) ಆಂಗ್ಲ ಭಾಷೆಯಲ್ಲಿ.

ಉ) ರೂ. ೨೦೦.೦೦.

ಊ) ಇಲ್ಲ.

ಕನ್ನಡ ಭಾಷೆಯಲ್ಲಿ ಪುಸ್ತಕವನ್ನು ಹೊರತರುವ ಸಲುವಾಗಿ, ಸ್ವಲ್ಪ ಭಾಗವನ್ನು ಆಯೋಗವು ಉಳಿಸಿಕೊಳ್ಳಲಿದೆ.

ಕಳೆದ ಹತ್ತು ವರ್ಷಗಳ ಹಿಂದೆ ಪ್ರಾಧಿಕಾರ ನಿರ್ಮಿಸಿರುವ ಬಡಾವಣೆಗಳ ಹೆಸರು

೨೫೦. ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕಳೆದ ಹತ್ತು ವರ್ಷಗಳ ಹಿಂದೆ ಪ್ರಾಧಿಕಾರ ನಿರ್ಮಿಸಿರುವ ಬಡಾವಣೆಗಳ ಹೆಸರು.

ಆ) ಅವುಗಳಲ್ಲಿ ಪೂರ್ತಿ ಅಭಿವೃದ್ಧಿ ಹೊಂದಿರುವ ಬಡಾವಣೆಗಳ ಸಂಖ್ಯೆ ?

ಇ) ಪೂರ್ತಿ ಅಭಿವೃದ್ಧಿ ಹೊಂದಿರುವ ಬಡಾವಣೆಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಬೆಂಗಳೂರು ಮಹಾ ನಗರ ಪಾಲಿಕೆಗೆ ವರ್ಗಾಯಿಸಲು ಪ್ರಸ್ತಾವ ವಿದೆಯೇ ?